ಶ್ರಮಿಸಬೇಕಾಗಿಲ್ಲ. ಅವರು ಸಹಜವಾಗಿದ್ದರೆ ಸಾಕು. ರಾಜಧಾನಿಯಲ್ಲಿ ಥಟ್ಟಂತ ಸ್ವೀಕರಿಸಲ್ಪಡುತ್ತಾರೆ. ಇದೆಲ್ಲಾ ಆರಂಭದಲ್ಲೇ ತಿಳಿದಿರುವುದು ಒಳ್ಳೇದು. ನಾನು ಮಾಡಿದ ತಪ್ಪನ್ನು ನೀವು ಮಾಡಬೇಡಿ ಎನ್ನುವುದಕ್ಕೆ ಹೇಳುತ್ತಿದ್ದೇನೆ.'

'ರಾಜಧಾನಿಯಲ್ಲಿ ಏನಾಗುತ್ತದೆ, ಸರ್?' ಒಬ್ಬಾಕೆ ಕೇಳುತ್ತಾಳೆ, ಬಹಳ ಮುಗ್ಧತೆಯಿಂದ.

'ಅಲ್ಲಿ ಏನಾಗುವುದಿಲ್ಲ ಎಂದು ಕೇಳಬೇಕಾಗುತ್ತದೆ. ವಾಸ್ತವದಲ್ಲಿ ನಿಮಗೆ ಗೊತ್ತಿರುವಷ್ಟೇ ನನಗೂ ಗೊತ್ತು. ನಾನಾದರೂ ಅಲ್ಲಿಗೆ ಹೋಗುವುದಿಲ್ಲವಲ್ಲ? ಆದರೆ, ಮೀಡಿಯಾಗಳಲ್ಲಿ ಕೇಳಿರುತ್ತೇವೆ, ನೋಡಿರುತ್ತೇವೆ. ವಾರವಾರವೂ ಪುಸ್ತಕ ಬಿಡುಗಡೆ ಸಮಾರಂಭಗಳು ನಡೀತವೆ; ಈಗ ಅವಕ್ಕೆ ಲೋಕಾರ್ಪಣೆ ಎಂದು ಕರೆಯುತ್ತಾರೆ. ಇವುಗಳ ಆಮಂತ್ರಣ ಪತ್ರಿಕೆಗಳನ್ನು ನೋಡಿದರೇ ನಾವು ಮೂರ್ಛೆಹೋಗಬೇಕು. ಅಷ್ಟೊಂದು ಘನವಂತರ ಹೆಸರುಗಳಿರುತ್ತವೆ... ಒಬ್ಬರು ಬಿಡುಗಡೆ ಮಾಡುವವರು, ಇನ್ನೊಬ್ಬರು ಲೇಖಕರ ಪರಿಚಯ ಮಾಡಿಕೊಡುವವರು, ಮಗುದೊಬ್ಬರು ಪುಸ್ತಕಗಳ ಬಗ್ಗೆ ಭಾಷಣ ಮಾಡುವವರು, ಇನ್ನು ಕೆಲವರು ಅತಿಥಿಗಳು, ಉಪಸ್ಥಿತರು ಇತ್ಯಾದಿ.'

'ಘ ಎಂದರೆ ಘನವಂತರಾ ಸರ್?'

'ಹೌದೆಂದು ಕಾಣುತ್ತದೆ; ಆದರೆ, ಆ ಪದವನ್ನು ಈಗ ಬೆನ್ನ ಹಿಂದಿನಿಂದಲ್ಲದೆ ಮುಂದಿನಿಂದ ಬಳಸುವುದಿಲ್ಲ. ಇರಲಿ. ಈ ಬಿಡುಗಡೆ ಯಾನೆ ಲೋಕಾರ್ಪಣದ ಬಗ್ಗೆ ಹೇಳುತ್ತಿದ್ದೆ. ವೇದಿಕೆಯ ಮೇಲಿರುವ ಈ ಘನವಂತರಿಗೆ ಪುಸ್ತಕದ ಒಂದೊಂದು ಪ್ರತಿಯನ್ನು ಕೊಡಲಾಗುತ್ತದೆ. ನಂತರ ಅವರೆಲ್ಲ ಪುಸ್ತಕದ ಪ್ರತಿಗಳನ್ನು ಹಿಡಿದು ಫೋಟೊಗೆ ಪೋಸ್ ಕೊಡುತ್ತಾರೆ.'

'ಅದು ಪೊಲೀಸ್ ಠಾಣೆಯಲ್ಲಿ ಕಳ್ಳರ ಕೈಲಿ ಸ್ಲೇಟ್ ಹಿಡಿಸಿ ಫೋಟೊ ತೆಗೆದ ಹಾಗೆ ಕಾಣಿಸ್ತೆ, ಸಾರ್.'

'ಇವರಲ್ಲಿ ಹೆಚ್ಚಿನವರೂ ವಿಮರ್ಶಕರಿರುತ್ತಾರೆ, ಅಥವಾ ಅಂಕಣಕಾರರು, ಪತ್ರಿಕಾ ಸಂಪಾದಕರು. ಯಾಕೆಂದರೆ ಬಿಡುಗಡೆಯಾದ ಪುಸ್ತಕಗಳ ಕುರಿತು ಮುಂದೆ ಲೇಖನ ಬರೆದು ಪ್ರಚಾರ ಮಾಡುವವರು ಇವರೇ, ಅದೇ ರೀತಿ ಪ್ರಶಸ್ತಿ, ಬಿರುದು ಇತ್ಯಾದಿಗಳನ್ನು ಕೊಡಿಸುವವರೂ ಇವರೇ. ಯಾವಾಗಲೂ ಇವರನ್ನು ಪ್ಲೀಸ್ ಮಾಡಿಕೊಂಡು ಇರಬೇಕಾಗುತ್ತದೆ. ಸಂಸ್ಕೃತದಲ್ಲಿ ಇದಕ್ಕೆ ಪರಸ್ಪರಂ ಭಾವಯಂತ ಎನ್ನುತ್ತಾರೆ. ಕನ್ನಡದಲ್ಲಿ ನೀ ನನಗಿದ್ದರೆ ನಾ ನಿನಗೆ!'

'ಕೆಲವು ಪುಸ್ತಕಗಳ ಬಗ್ಗೆ ಬಿಡುಗಡೆಯ ಮೊದಲೇ ಅಥವಾ ಬಿಡುಗಡೆಯ ದಿನವೇ ಲೇಖನಗಳು ಬರುತ್ತವಲ್ಲಾ, ಸಾರ್?'

'ಕರೆಕ್ಟ್. ಅವು ಗಣ್ಯಾತಿಗಣ್ಯರ ಪುಸ್ತಕಗಳು, ಘನವಂತರ ಕೃತಿಗಳು. ಹಾಗೆಯೇ ಗಣ್ಯ ಲೇಖಕರ ಪ್ರತಿಯೊಂದು ಜನ್ಮದಿನವೂ ಅದ್ದೂರಿಯಿಂದ ಆಚರಿಸಲ್ಪಡುತ್ತದೆ. ಪುಸ್ತಕ ಬಿಡುಗಡೆ, ಜನ್ಮದಿನ ಇತ್ಯಾದಿ ಸಮಾರಂಭಗಳಲ್ಲಿ ಆಮಂತ್ರಿತರಿಗೆ ತಿಂಡಿ ತೀರ್ಥ ಕೂಡ ದೊರಕುತ್ತದೆ ಎಂದು ಕೇಳಿದ್ದೇನೆ. ಅದಿಲ್ಲದಿದ್ದರೆ ಜನ ಬರುವುದು ಕಡಿಮೆ ಎನ್ನುತ್ತಾರೆ. ಜನ ಕಡಿಮೆಯಾದರೆ ಕೇವಲ ವೇದಿಕೆಯಲ್ಲಿ ಸಾಲಾಗಿ ಕೂತ ಘನವಂತರ ಫೋಟೊ ಮಾತ್ರ ಮೀಡಿಯಾಗಳಲ್ಲಿ ಬರುತ್ತವೆ. ಮರುದಿನ ಪತ್ರಿಕೆಗಳಲ್ಲಿ ಬಿಡುಗಡೆಗಾರರ ಒಂದು ಉದ್ಧರಣವಾಕ್ಯದ ಹೆಡ್‌ಲೈನಿನ ಕೆಳಗೆ ಅವರ ಕೆಲವು ಮಾತುಗಳು ವರದಿಯಾಗುತ್ತವೆ. ನಾವು ಇವನ್ನೆಲ್ಲ ದೂರದಿಂದಲೇ ಓದಿ ಅರಿವು ಗಳಿಸುತ್ತೇವೆ. ಇದೊಂದು ಡಿಸ್ಟೆನ್ಸ್ ಎಜುಕೇಶನ್ ಇದ್ದ ಹಾಗೆ. ಅವರು ದಿನವೂ ಸುರಿಸುವ